1	2	3	4
07	P.K. Shanbhag, Executive Director, K. Anjinappa Director, (Marketing) G.S. Bhat, General Manager (Finance) Company Secretary i/c	COMPT/LOK /BCD/423/2003 Dated : 05.02.2003	48.40 lakhs
08	P.K. Shanbhag, Executive Director, K, Anjinappa Director, (Marketing) G.S. Bhat, General Manager (Finance) Company Secretary i/c	COMPT/LOK /BCD/1508/2003 ARLO-1	
09	K.B. Patil, General Manager, (RD,QAD & ADMN)	No. UPALOKA BCD/18 04/DRE-5	

ಶ್ರಮ ಶಕ್ತಿ ಯೋಜನೆ ಬಗ್ಗೆ

165(179) ಶ್ರೀ ಜಿ. ಕೃಷ್ಣ ಪಾಲೇಮಾರ.(ಸೂರತ್ಕಲ್) : ಮಾನ್ಯ ಭಾರಿ, ಮಧ್ಯಮ ಹಾಗೂ ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಸಾಂಪ್ರದಾಯಿಕ ಕುಶಲ ಕಾರ್ಮಿಕರ ಮತ್ತು ಸೇವೆ ಒದಗಿಸುವ ಅಗಸ, ಕಂಬಾರ, ಗಾಣಿಗ. ಬಡಗಿ ಸವಿತಾ ಸಮಾಜ ಮುಂತಾದ ಜನ ಸಮುದಾಯದವರು ಸಾಂಪ್ರದಾಯಿಕ ಮಾರುಕಟ್ಟೆಯನ್ನು ಕಳೆದುಕೊಳ್ಳುತ್ತಿದ್ದು ತಮ್ಮ ಪಾರಂಪರಿಕ ಉದ್ಯೋಗ ಮತ್ತು ವೃತ್ತಿ ಕುಶಲತೆಯನ್ನು ಕಳೆದು ಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ, ಅವರ ರಕ್ಷಣೆಗಾಗಿ ಹಮ್ಮಿಕೊಂಡ ಕ್ರಮಗಳೇನು ;

ಇ) ಸಾಂಪ್ರದಾಯಿಕ ವೃತ್ತಿದಾರರ ಕುಶಲತೆ ಮತ್ತು ವೃತ್ತಿ ತಂತ್ರಜ್ಞಾನವನ್ನು ಮೇಲ್ದರ್ಜೆಗೇರಿಸಲು ಯೋಜನೆಗಳನ್ನು ರೂಪಿಸಲಾಗಿದೆಯೇ; ಹಾಗಿದ್ದಲ್ಲಿ, ಅದರ ವಿವರಗಳೇನು ;

ಈ) ಶ್ರಮಶಕ್ತಿ ಯೋಜನೆಯು ಜಾರಿಯಲ್ಲಿದೆಯೇ; (ವಿವರಗಳನ್ನು ನೀಡುವುದು)?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಭಾರಿ, ಮಧ್ಯಮ ಹಾಗೂ ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು) :

ಅ) ಹೌದು.

ಆ) ಗ್ರಾಮೀಣ ಕಸಬುದಾರರಿಗೆ ತಮ್ಮ ವೃತ್ತಿಯನ್ನು ಅಭಿವೃದ್ಧಿ ಪಡಿಸಲು ಪ್ರಧಾನಮಂತ್ರಿಗಳ ರೋಜಗಾರ್ ಯೋಜನೆಯಡಿಯಲ್ಲಿ ಅರ್ಹ ಕಸಬುದಾರರಿಗೆ ಆರ್ಥಿಕ ನೆರವು ನೀಡಲಾಗುತ್ತದೆ.

ವಿಶ್ವ ಯೋಜನೆಯಡಿಯಲ್ಲಿ ತರಬೇತಿ ಮತ್ತು ಮೂಲಭೂತ ಸೌಕರ್ಯಗಳ ಸೃಷ್ಟಿಗೆ ಅವಕಾಶ ಮಾಡಿಕೊಡಲಾಗುತ್ತದೆ. ಖಾದಿ ಗ್ರಾಮೋದ್ಯೋಗ ಕ್ಷೇತ್ರದಲ್ಲಿಯೂ ಸಹ ಕಸಬುದಾರರಿಗೆ ಘಟಕಗಳನ್ನು ಸ್ಥಾಪಿಸಲು ಹಣಕಾಸು ಸಂಸ್ಥೆಯ ನೆರವಿನೊಂದಿಗೆ ಮಂಡಳಿಯಲ್ಲಿ ಅಂಚು ಹಣ ನೀಡಲಾಗುತ್ತಿದೆ.

ಕರಕುಶಲ ಕಸಬುದಾರರು ತಮ್ಮ ಚಟುವಟಿಕೆಗಳನ್ನು ಸಂಘಟಿತ ರೂಪದಲ್ಲಿ ಕೈಗೊಳ್ಳಲು ನೆರವಾಗುವಂತೆ ಕಾಯಕ ನಗರಗಳನ್ನು ರಾಜ್ಯದ ವಿವಿದಡೆ ಸ್ಥಾಪಿಸುವ ಯೋಜನೆಯನ್ನೂ ಸಹ ಕೈಗೊಳ್ಳಲಾಗಿದೆ.

ಇ) ಪ್ರತಿ ಕ್ಷೇತ್ರದ ಕಸಬುದಾರರ ನೈಪುಣ್ಯತೆಯನ್ನು ಹೆಚ್ಚಿಸುವ ರೀತಿಯಲ್ಲಿ ತರಬೇತಿ ಕಾರ್ಯಕ್ರಮಗಳು ಹಾಗು ಆಧುನಿಕ ಸಲಕರಣೆಗಳನ್ನು ಸಂಬಂಧಪಟ್ಟ ಕ್ಷೇತ್ರದ ಅಂದರೆ ಚರ್ಮೋದ್ಯಮ, ನಾರು, ಕೈಮಗ್ಗ, ಕರಕುಶಲ, ಗ್ರಾಮೋದ್ಯೋಗ ಮುಂತಾದ ನಿಗಮಗಳ/ಮಂಡಳಿಗಳಿಂದ ನೀಡಲಾಗುತ್ತದೆ. ಜೊತೆಯಲ್ಲಿ ಪ್ರತಿಯೊಂದು ಕಾಯಕ ನಗರದಲ್ಲೂ ಸಹ ಸಾಮೂಹಿಕ ಕಾರ್ಯಾಗಾರಗಳನ್ನು ನಿರ್ಮಿಸುವ ಉದ್ದೇಶವಿದೆ.

ಈ) ಈ ಯೋಜನೆಯು ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯಡಿ ಜಾರಿಯಲ್ಲಿರುವುದಿಲ್ಲ.

ಮೈಸೂರು ಸುತ್ತ ಮುತ್ತ ಕೈಗಾರಿಕೆಗಳಿಗಾಗಿ ಜಮೀನು ಸ್ವಾಧೀನ

166(361) ಶ್ರೀ ಶಂಕರಲಿಂಗೇಗೌಡ ಹೆಚ್. ಎಸ್.(ಚಾಮರಾಜ) : ಮಾನ್ಯ ಭಾರಿ, ಮಧ್ಯಮ ಹಾಗು ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಮೈಸೂರು ನಗರ ಸುತ್ತಮುತ್ತ ಮೈಸೂರು ತಾಲ್ಲೂಕುಗಳಲ್ಲಿ, ಕೈಗಾರಿಕೆಗಳ ಸ್ಥಾಪನೆ ಹಾಗೂ ಅಭಿವೃದ್ಧಿಗಾಗಿ ಭೂಸ್ವಾಧೀನ ಪಡಿಸಿಕೊಂಡ ಜಮೀನುಗಳು ಎಷ್ಟು ;

ಆ) ಅವುಗಳ ಜಮೀನುದಾರರಿಗೆ ಇನ್ನೂ ಪರಿಹಾರ ನೀಡಲು ಬಾಕಿ ಇರುವ ಪ್ರಕರಣಗಳು ಎಷ್ಟು ; (ವಿವರಗಳನ್ನು ನೀಡುವುದು) ;

ಇ) ಬಾಕಿ ಇರುವ ಸದರಿ ಪ್ರಕರಣಗಳು ಯಾವ ಯಾವ ಹಂತದಲ್ಲಿದೆ ;

ಈ) ಸದರಿ ಪ್ರಕರಣಗಳನ್ನು ಇತ್ಯರ್ಥಪಡಿಸಲು ಸರ್ಕಾರದ ವತಿಯಿಂದ ಯಾವ ಯಾವ ಪ್ರಯತ್ನಗಳನ್ನು ಮಾಡಲಾಗಿದೆ ; (ಪ್ರಕರಣವಾರು ವಿವರಗಳನ್ನು ನೀಡುವುದು) ;

ಉ) ಈ ಪ್ರಕರಣಗಳ ಜಮೀನುದಾರರ ಕೋರಿಕೆಯಾದರೂ ಏನು ; (ಪ್ರಕರಣವಾರು ವಿವರ ತಿಳಿಸಿ) ?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಭಾರಿ, ಮಧ್ಯಮ ಹಾಗು ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು) :

ಅ) ಮೈಸೂರು ತಾಲ್ಲೂಕಿನಲ್ಲಿ ಕೈಗಾರಿಕಾ ಉದ್ದೇಶಗಳಿಗೆ ಸ್ವಾಧೀನಪಡಿಸಿಕೊಂಡಿರುವ ಜಮೀನುಗಳ ವಿವರಗಳು ಈ ಕೆಳಕಂಡಂತೆ ಇದೆ :

ಮೈಸೂರು ತಾಲ್ಲೂಕಿನ, ಕಸಬಾ ಹೋಬಳಿ, ಹೆಬ್ಬಾಳು, ಹಿನಕಲ್, ಹೂಟಗಳ್ಳಿ, ಕೂರ್ಗಳ್ಳಿ, ಮೇಟಗಳ್ಳಿ, ಶ್ಯಾದನಹಳ್ಳಿ, ಬಲವತ್ತ, ನಾಗನಹಳ್ಳಿ, ಬೆಲವಾಡಿ, ಇಲವಾಲ, ಬ್ಯಾತಹಳ್ಳಿ ಸಿಂಧುವಳ್ಳಿ, ಮರಶೆ, ಚಿಕ್ಕಕಾನ್ಯ, ಕುರುಬರಹಳ್ಳಿ ಮತ್ತು ಮೈಸೂರು ಗ್ರಾಮಗಳು ಸೇರಿದಂತೆ ಒಟ್ಟು 3844–08 ಎಕರೆ ಪ್ರದೇಶವನ್ನು ಭೂಸ್ವಾಧೀನಪಡಿಸಲಾಗಿದೆ